# 4

# ಯೇಸು, ಯಾವಾಗ, ಎಲ್ಲಿ ಮತ್ತು ಹೇಗೆ ಜೀವಿಸಿದನು?

ಒಂದಾನೊಂದು ಕಾಲದಲ್ಲಿ ಎಂದು ಯೇಸುವಿನ ಕಥೆಯನ್ನು ಸುವಾರ್ತೆಗಳಲ್ಲಿ ಆರಂಭಿಸದೆ, ಯೇಸು ಎಂಬ ಮನುಷ್ಯನಿದ್ದನು ಎಂದು ಆರಂಭಿಸಲಾಗಿದೆ. ಆತನು ಒಂದು ಕಾಲದಲ್ಲಿ ಜೀವಿಸಿದನು ಎಂದು ತಿಳಿಯದೇ, ಈ ಮೇಲಿನಂತೆ, ಜನರು ತಿಳಿಯುವವರಾಗಿದ್ದಾರೆ: ಆದರೆ ಸುವಾರ್ತೆಯು ಮಾತ್ರ ವಿಭಿನ್ನವಾಗಿ ತಿಳಿಸುತ್ತದೆ. ಯೇಸುವಿನ ಜೀವನ ಹಾಗೂ ಸೇವೆಯ ಕುರಿತು ಲೂಕನ ವಿವರಣೆಯನ್ನು ಗಮನಿಸಿರಿ:

> ಚಕ್ರವರ್ತಿಯಾದ ತಿಬೇರಿಯನು ಪಟ್ಟಕ್ಕೆ ಬಂದ ಹದಿನೈದನೆಯ ವರುಷದಲ್ಲಿ, ಪೊಂತ್ಯಪಿಲಾತನು ಯುದಾಯಕ್ಕೆ ಅಧಿಪತಿಯೂ ಹೆರೋದನು ಗಲಿಲಾಯಕ್ಕೆ ಉಪರಾಜನೂ ಅವನ ತಮ್ಮನಾದ ಫಿಲಿಪ್ಪನು ಇತುರಾಯ ತ್ರಕೋನೀತಿ ಸೀಮೆಗಳಿಗೆ ಉಪರಾಜನೂ ಲುಸನ್ಯನು ಅಬಿಲೇನೆಗೆ ಉಪರಾಜನೂ ಆಗಿರುವಲ್ಲಿ ಅನ್ನನೂ ಕಾಯಫನೂ ಮಹಾಯಾಜಕರಾಗಿದ್ದ ಕಾಲದಲ್ಲಿ ಜಕರೀಯನ ಮಗನಾದ ಯೋಹಾನನಿಗೆ ಅಡವಿಯಲ್ಲಿ ದೇವರ ವಾಕ್ಯವುಂಟಾಯಿತು (ಲೂಕ 3:1, 2).

ಲೂಕನು ಯುದಾಯದ ಅಧಿಕಾರಿಯಾದ ಟೆಟ್ರಾರ್ಚನ ಹಾಗೂ ರೋಮಾಯದ ಅಧಿಕಾರಿಯ ಬಗ್ಗೆ ದಾಖಲು ಮಾಡಿರುವನು ("ನಾಲ್ಕನೆಯ ಭಾಗದ ಅಧಿಕಾರಿಗಳು") ಅವರು ಪಾಲಿಸ್ಟೇನಿನ ವಿವಿಧ ಭಾಗಗಳಲ್ಲಿ ಅಧಿಕಾರ ನಡೆಸುತ್ತಿದ್ದರು. ಯೇಸುವಿನ ಹಾಗೂ ಯೋಹಾನನ ಕಾಲದಲ್ಲಿದ್ದ ಯೆಹೂದ್ಯರ ಮಹಾಯಾಜಕರ ಕುರಿತಾಗಿಯೂ ದಾಖಲಿಸಿರುವನು. ಅದೇ ರೀತಿಯಲ್ಲಿ ಮತ್ತಾಯನು ಸಹ, ಯೇಸು ಯುದಾಯದ ಹೆರೋದನ ಅಧಿಕಾರಾವಧಿಯಲ್ಲಿ ಬೆತ್ಲೆಹೇಮಿನಲ್ಲಿ ಜನಿಸಿದನು ಎಂದು ದಾಖಲಿಸಿರುವನು (ಮತ್ತಾಯ 2:1). ಮತ್ತಾಯ ಮತ್ತು ಲೂಕನ ಸುವಾರ್ತೆಯಲ್ಲಿ ದಾಖಲಿಸಿರುವ ಇತಿಹಾಸಕಾರರು ಹೊಸ ಒಡಂಬಡಿಕೆಯ ಹೊರತಾಗಿರುವ ಅಧಿಕಾರಿಗಳ ಕುರಿತು ಬರೆದಿರುವರು. ಅವರ ಕಾಲಮಾನಗಳನ್ನು ಸಹ ನಿಖರವಾಗಿ ತಿಳಿಸಬಹುದು. ಇದರ ಮೂಲಕವಾಗಿ ಸುವಾರ್ತಾ ಬರಹಗಾರರು ಇತಿಹಾಸದಲ್ಲಿರುವ ಯೇಸುವಿನ ಕಾಲಮಾನಗಳನ್ನು ಸ್ಪಷ್ಟವಾಗಿ ತಿಳಿಸಬಹುದಾಗಿದೆ, ಆ ಸಮಯ ಯಾವುದು, ಆ ಸ್ಥಳವು ಎಲ್ಲಿತ್ತು?

## ಆತನು ಯಾವ ಸಮಯದಲ್ಲಿ ಜೀವಿಸಿದ್ದನು?

ಯೇಸುವಿನ ಹಾಗೂ ನಾವು ಜೀವಿಸಿರುವ ಕಾಲಕ್ಕೂ ಅಜಗಜಾಂತರವಿರುವದಾದರೂ ಆತನ ಜೀವಿತ ಕಾಲದ ನಿಖರವಾದ ಸಮಯವನ್ನು ತಿಳಿಯಬಹುದಾಗಿದೆ. ಈಗ ಆತನ ಜನನದ ಸಮಯದಿಂದ ಆರಂಭಿಸೋಣ.

"ಅರಸನಾದ ಹೆರೋದನ ಕಾಲದಲ್ಲಿ" ಯೇಸು ಹುಟ್ಟಿದನು ಎಂದು ಮತ್ತಾಯ 2:1 ತಿಳಿಸುತ್ತದೆ (ನೋಡಿರಿ ಲೂಕ 1:5). ಯೇಸುವಿನ ಸಮಯದಲ್ಲೂ, ಅನಂತರದಲ್ಲೂ ರೋಮಾಯವು ಪಾಲೇಸ್ತೆನರ ಆಡಳಿತದಲ್ಲಿತ್ತು. ನಂತರದಲ್ಲಿ, ಯೆಹೂದ್ಯರು ತಮ್ಮದೇ ಆದ ಸಣ್ಣ ಪುಟ್ಟ ಅರಸರುಗಳನ್ನು ಹೊಂದುವ ಅಪ್ಪಣೆಯನ್ನು ರೋಮಾಯರು ನೀಡಿದ್ದರು. ಅಂಥವರನ್ನು ರೋಮಾಯರೇ ಆಯ್ಕೆಮಾಡಿ ತಮ್ಮ ಆಸಕ್ತಿಯನ್ನು ಅವರು ಮಾಡುವಂತೆ

ಅವರನ್ನು ಪ್ರಚೋಧಿಸಿದ್ದರು. ಹೆರೋದ ಎಂಬದು ಹೆಸರಾಗಿದ್ದರೂ, ಅದು ರಾಜಮನೆತನದ ಹೆಸರಾಗಿತ್ತು. ಇಲ್ಲಿ ಐದು ಜನ "ಹೆರೋದ್ಯರ" ಹೆಸರನ್ನು ನಮೂದಿಸಲಾಗಿದೆ.[1]

ಯೇಸುವಿನ ಕಾಲದಲ್ಲಿ ಆಡಳಿತ ನಡೆಸುತ್ತಿದ್ದವನು "ಹೆರೋದ ಮಹಾರಾಜನು" ಅವನು ಸಹ ಇತಿಹಾಸದಲ್ಲಿ ಪ್ರಮುಖ ವ್ಯಕ್ತಿಯಾಗಿದ್ದನು. ಆತನ ಕುರಿತು ಹೆಚ್ಚಾಗಿ ಅರಿತಿರುವೆವು (ಜೋಷಿಪಸ್‌ನಿಂದ) ಅವನು ಮಹಾಕ್ರೂರಿ ಹಾಗೂ ಮೂಡನಂಬಿಕೆಯುಳ್ಳವನಾಗಿ, ತನಗೆ ವಿರೋಧವಾದವರನ್ನು ನಿರ್ದಾಕ್ಷಿಣ್ಯವಾಗಿ ಕೊಂದುಹಾಕುತ್ತಿದ್ದನು. ಮತ್ತಾಯ 2:16-18 ದಾಖಲೆಯಲ್ಲಿ, ಅವನ ಕ್ರೂರ ಸಾಕ್ಷಿಯನ್ನು ನೋಡುತ್ತೇವೆ. ಈ ಮಾಹಿತಿಯನ್ನು ಬೈಬಲಿನ ಹೊರಗಿನ ಮೂಲಗಳು ಸ್ಥಾಪಿಸದಿದ್ದರೂ ಆತನ ಬಗ್ಗೆ ತಮಗೆ ತಿಳಿದಿರುವ ಸಮಾಚಾರದೊಂದಿಗೆ ಹೊಂದಿಕೆಯಾಗಿವೆ. ಇಲ್ಲಿ ಅವನ ಸ್ವಭಾವವನ್ನು ಕಾಣುತ್ತೇವೆ. ಹೀಗಿರುವಲ್ಲಿ, ಅವನನನ್ನು "ಹೆರೋದ ಮಹಾರಾಜನು" ಎಂದು ಏಕೆ ಕರೆದರು? ಅವನು ರೋಮಾಯರಿಗೆ ಮೆಚ್ಚಿಕೆಯಾದ ಅರಸನಾಗಿದ್ದನು (ಯೆಹೂದ್ಯರ ಪ್ರಕಾರವೂ ಅವನು ಪರಿಣಿತ ಅಧಿಕಾರಿಯಾಗಿದ್ದನು) ಅವನು ಉನ್ನತವಾದ ಕಟ್ಟಡಗಳನ್ನು ಸಹ ನಿರ್ಮಿಸಿದನು, ಅವನು ಅದನ್ನು ವಿಸ್ತಾರಮಾಡಿ, ಸುಂದರವಾಗಿ ನಿರ್ಮಿಸಿದ್ದನು. (ಅವನ ಆಡಳಿತ ಕಾಲದಲ್ಲಿ ಆರಂಭವಾಗಿದ್ದರೂ, ಅದು ಪೂರ್ಣಗೊಂಡಿರಲಿಲ್ಲ.) ಈ ಘಟನಾವಳಿಗಳು, ಯೇಸುವಿನ ಜನನದ ದಿನಾಂಕವನ್ನು ತಿಳಿಸುತ್ತವೆಯೇ? ಹೆರೋದನು ಕ್ರಿ.ಪೂ. 37 ರಿಂದ ಕ್ರಿ.ಪೂ. 4ರವರೆಗೆ ಆಡಳಿತ ಮಾಡಿದ್ದನು ಎಂದು ಯೋಸೇಫಸನು ದಾಖಲಿಸಿರುವನು; ಈ ಹೆರೋದನ ಆಡಳಿತಾವಧಿಯಲ್ಲಿಯೇ ಯೇಸು ಜನಿಸಿದನು ಎಂದು ಹೊಸ ಒಡಂಬಡಿಕೆಯು ದೃಢೀಕರಿಸುತ್ತದೆ. ಕ್ರಿ.ಪೂ. ದಲ್ಲಿ ಯೇಸು ಹುಟ್ಟಿದನು ಎಂಬದು ಸಮಸ್ಯೆಯಾಗುತ್ತದೆ! ನಮ್ಮ ಪಂಚಾಂಗದಲ್ಲಿ ತಪ್ಪೆಸಗಲಾಗಿದೆ. ಯೇಸುವಿನ ಜನನದ ದಿನದಿಂದ ಕಾಲಮಾನವನ್ನು ಅಳೆಯಬೇಕಾಗಿದೆ, ಆದರೆ ಡೆನಿಸ್ ದಿ ಸ್ಮಾಲ್ ಎಂಬಾತನು ಇದರಲ್ಲಿ ತಪ್ಪು ಲೆಕ್ಕಾಚಾರವನ್ನು ಮಾಡಿರುವನು (ಪಂಚಾಂಗವನ್ನು ನಿರ್ಮಿಸಿದ ಒಬ್ಬ ಸನ್ಯಾಸಿ). ಇದರ ಪರಿಶೀಲನೆಯನ್ನು ಮಾಡಲಾಗಿ ಕ್ರಿ.ಪೂ. 4ರಲ್ಲಿ ಯೇಸುವಿನ ಜನನವಾಯಿತು ಎಂದು ಗುರುತಿಸಲಾಗಿದೆ. ಆ ಸಮಯದಲ್ಲಿ ಹೆರೋದ ಮಹಾ ರಾಜನು ಇನ್ನು ಬದುಕಿದ್ದು ಆಡಳಿತ ನಡೆಸುತ್ತಿದ್ದನು.

ಮತ್ತಾಯ 2:16-18 ರಲ್ಲಿ (ಹೆರೋದನು ಸಕಲ ಗಂಡು ಮಕ್ಕಳನ್ನು ಕೊಂದು, ಯೇಸುವನ್ನು ಕೊಲ್ಲಲು ಯತ್ನಿಸಿದ್ದನು). ಈ ಘಟನೆಯ ಸಂದರ್ಭದಲ್ಲಿ ಯೇಸು ಎರಡು ವರ್ಷಪ್ರಾಯದವನಾಗಿರಬಹುದು. ಸಕಲ ಗಂಡು ಮಕ್ಕಳನ್ನು ಕೊಲ್ಲುವ ಮೂಲಕ ಯೇಸುವನ್ನು ನಿರ್ನಾಮ ಮಾಡಬಹುದೆಂದು ಹೆರೋದನು ಆಲೋಚಿಸಿದ್ದನು. ಬೆತ್ಲೆಹೇಮಿನಲ್ಲಿದ್ದ ಹಾಗೂ ಅದರ ಸುತ್ತಲಿನ ಎರಡು ವರ್ಷದ ಸಕಲ ಗಂಡು ಮಕ್ಕಳನ್ನು, ಅಂದರೆ ಅದರ ಕುರಿತ ಸರಿಯಾದ ಲೆಕ್ಕಾಚಾರವನ್ನು ಮಾಡಿದಾಗ, ಪ್ರಾಯಶಃ ಯೇಸು ಎರಡು ವರ್ಷ ಪ್ರಾಯದವನಾಗಿರಬಹುದು. ಈ ಲೆಕ್ಕಾಚಾರದ ಪ್ರಕಾರವಾಗಿ ಯೇಸು ಕ್ರಿ.ಪೂ. 7-5ರ ಅಂತರದಲ್ಲಿ ಜನಿಸಿರಬಹುದು ಎಂಬುದು ಪಂಡಿತರ ಲೆಕ್ಕಾಚಾರವಾಗಿದೆ.

ಯೇಸು ಸೇವೆಯನ್ನು ಆರಂಭ ಮಾಡಿದ ಕಾಲಮಾನವನ್ನು ತಿಳಿಯುವದು ಮುಂದಿನ ವಿಷಯವಾಗಿದೆ. ಅದರ ನೇರವಾದ ದಿನಾಂಕವನ್ನು ಒಂದು ಸುವಾರ್ತೆಯಲ್ಲಿ ಸ್ಪಷ್ಟಪಡಿಸಲಾಗಿದೆ. ಲೂಕ 3:23ರಲ್ಲಿ, ಯೇಸು ಸೇವೆಯನ್ನು ಆರಂಭ ಮಾಡಿದಾಗ ಮೂವತ್ತು ವರ್ಷದವನಾಗಿದ್ದನು ಎಂದು ತಿಳಿಸುತ್ತದೆ. ನಾವು ಬಯಸುವ ನಿರ್ದಿಷ್ಟವಾದ ಕಾಲಮಾನವನ್ನು ಲೂಕನು ತಿಳಿಸದೆ ಇರಬಹುದು (ಯೇಸು 28? 30? 32? ವರ್ಷ ಪ್ರಾಯದವನಾಗಿದ್ದನೇ?), ಅದಾಗ್ಯೂ ಅದು ನಮಗೆ ಸಹಾಯ ಮಾಡುತ್ತದೆ. ಯೇಸು ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುವವರೆಗೆ ಆತನ ಜೀವಿತದ ವರ್ಷಗಳು ಗೌಪ್ಯವಾಗಿತ್ತು. ಲೂಕ 3:1, 2 ತಿಬೇರಿಯ ಕೈಸರನ "ಹದಿನೈದು ವರ್ಷಗಳ ... ಆಡಳಿತಾವಧಿಯನ್ನು ಯೋಹಾನನು ತಿಳಿಸಿರುವನು" ಅದು ಪ್ರಾಯಶಃ ಕ್ರಿ.ಶ. 27-28 ಇರಬಹುದು. ಒಂದು

ವೇಳೆ ಆತನು ಕ್ರಿ.ಪೂ. 7ರಿಂದ 5ರಲ್ಲಿ ಹುಟ್ಟಿರಬಹುದು. ಇದು ಸ್ಪಷ್ಟವಾಗಿದೆ. ಮತ್ತು ಆತನು ಮೂವತ್ತು ವರ್ಷದವನಾಗಿದ್ದಾಗ, ಸೇವೆಯನ್ನು ಆರಂಭಿಸಿದ್ದನು (ಯೋಹಾನನು ಆರಂಭಿಸಿದ ಸಮಯದಲ್ಲಿ).

ಯೇಸು ಎಷ್ಟು ವರ್ಷಗಳ ಕಾಲ ಸೇವೆಯನ್ನು ಮುಂದುವರೆಸಿದನು ಎಂಬುದನ್ನು ಸಹ ಕಂಡುಹಿಡಿಯಬಹುದಾಗಿದೆ. ಆತನ ಸಾರ್ವಜನಿಕ ಸೇವೆಯು ಮರಣದಲ್ಲಿ ಅಂತ್ಯವಾದ್ದರಿಂದ, ಆತನು ಮರಣ ಹೊಂದಿದಂಥ ಹಾಗೂ ಸೇವೆಯ ಕಾಲವಧಿಯನ್ನು - ನಿಖರವಾಗಿ ಹೇಳಬಹುದಾಗಿದೆ.

ಯೆಹೂದ್ಯ ಪಂಚಾಂಗದ ಪ್ರಕಾರ, ಯೇಸು ಪಸ್ಕ ಹಬ್ಬದ ಆಚರಣೆಗೆ ಯೆರೂಸಲೇಮಿಗೆ ಎಷ್ಟು ಬಾರಿಬೇಟಿ ನೀಡಿದ್ದನು ಎಂಬುದರಲ್ಲಿ ಆತನ ಆಯುಷ್ಯನು ಅಳೆಯ ಬಹುದಾಗಿದೆ. ಯೇಸು ಒಂದೇ ಸಾರಿ ಭೇಟಿ ನೀಡಿದ ವಿಷಯವನ್ನು ಸೈನೋಪ್ಟಿಕ್ಸ (ಮತ್ತಾಯ, ಮಾರ್ಕ, ಲೂಕ) ತಿಳಿಸುತ್ತದೆ, ಆತನು ಕ್ರೂಜಿತನಾದ ಸಮಯದಲಿಲ ಆಚರಿಸಿದ ಪಸ್ಕದ ಬಗ್ಗೆ ಮಾತ್ರ ತಿಳಿಸುತ್ತದೆ. ಇದನ್ನು ಪರಿಗಣಿಸುವದಾದರೆ, ಯೇಸು ಮಾಡಿದ ಸಾರ್ವಜನಿಕ ಸೇವೆಯು (ಆತನ ದೀಕ್ಷಾಸ್ನಾನ, ಅರಣ್ಯದಲ್ಲಿನ ಶೋಧನೆ, ಹಾಗೂ ಮರಣದವರೆಗಿನ ಸಮಯ) ಒಂದು ವರ್ಷಕಾಲ ಮಾತ್ರ ಎಂದು ನಿರ್ಣಯಿಸಬಹುದಾಗಿದೆ. ಅಥವಾ ಅದಕ್ಕಿಂತಲೂ ಕಡಿಮೆ ಅವಧಿ ಇರಬಹುದು. ಆರೆ ಯೋಹಾನನು ಆತನ ಸೇವಾ ಅವಧಿ ಎರಡರಿಂದ, ಮೂರು ವರ್ಷಗಳ ಕಾಲ ಇರಬಹುದು ಎಂದು ತಿಳಿಸಿರುವನು. ಯಾಕಂದರೆ, ಯೇಸು ಪಸ್ಕ ಹಬ್ಬಕೆ ಮೂರು ಬಾರಿ ಹೋಗಿದ್ದನು (ಯೋಹಾನ 1:13; 6:4; 11:55). ಆದ್ದರಿಂದ ಆತನ ಸೇವಾ ಅವದಿ 2 ರಿಂದ 3 ವರ್ಷಗಳ ಕಾಲವಾಗಿದೆ. ಒಂದು ವೇಳೆ ಆತನ ಸೇವೆಯು ಕ್ರಿ.ಶ. 27-28ರಲ್ಲಿ ಆರಂಭವಾಗಿದ್ದರೆ, ಯೇಸು ಕ್ರಿ.ಶ. 30ರಲ್ಲಿ ಮರಣಹೊಂದಿರಬಹುದು. ಸತ್ಯವೇದ ಹೊರತಾಗಿರುವ ದಾಖಲೆಗಳು ಮಾಹಿತಿಯನ್ನು ದೃಢಪಡಿಸುತ್ತವೆ (ಸಭೆ).

ಯೇಸು ಯಾವ ಸಮಯದಲ್ಲಿ ಜೀವಿಸಿದನು? ಎಂಬ ಪ್ರಶ್ನೆಗೆ ಆತನು ಕ್ರಿ.ಪೂ. 7-5ರಲ್ಲಿ ಜನಿಸಿ, ಕ್ರಿ.ಶ. 27-28ರಲ್ಲಿ ಸೇವೆಯನ್ನು ಆರಂಭಿಸಿ, ಕ್ರಿ.ಶ. 30ರಲ್ಲಿ ಮರಣ ಹೊಂದಿದನು ಎಂದು ನಿಖರವಾಗಿ ಹೇಳಬಹುದಾಗಿದೆ. 2 ಸಾವಿರ ವರ್ಷಗಳ ಹಿಂದಿನ ಲೆಕ್ಕಾಚಾರ ಈ ಅಂಶವಾಗಿರುತ್ತದೆ!

## ಆತನು ಯಾವ ಸ್ಥಳದಲ್ಲಿ ಜೀವಿಸಿದ್ದನು?

ಯೇಸು (ಇತರೆ ಮೂಲಗಳು ತಿಳಸುವಂತೆ) ಪಾಲಿಸ್ತೇನಿನಲ್ಲಿ ಜೀವಿಸಿದ್ದನು ಎಂದು ಹೊಸ ಒಡಂಬಡಿಕೆಯ ಮೂಲಗಳು ತಿಳಿಸುತ್ತವೆ.

ಅದು ವಿಸ್ತಾರವಾದ ಹಾಗೂ ಸಮೃದ್ಧಿಯಾದ ಸ್ಥಳವನ್ನು ಹೊಂದಿದ್ದರೂ, ದುಃಖಕರವಾದ ಇತಿಹಾಸವನ್ನು ಹೊಂದಿತ್ತು. ಇಸ್ರಾಯೇಲ್ಯರು "ದೇವರ ಜನರೆಂದು ಕರೆಯುವ ಮೊದಲೇ, ದೇವರು ಈ ಸ್ಥಳವನ್ನು ಅವರಿಗೆ ವಾಗ್ದಾನವಾಗಿ ನೀಡಿದ್ದನು." ಅವರು ಐಗುಪ್ತದಿಂದ ತಪ್ಪಿಸಿಕೊಂಡು ಹೊರ ಬಂದ ನಂತರ, ಅವರ ಅವಿಧೇಯತೆಯ ದೆಸೆಯಿಂದ, ದೇವರು ಅವರನ್ನು ಅರಣ್ಯದಲ್ಲಿ ನಾಲ್ವತ್ತು ವರ್ಷಗಳ ಕಾಲ ನಡೆಸಿದನು (ಅರಣ್ಯಕಾಂಡ 13; 4; ನಾಲ್ವತ್ತು ವರ್ಷಗಳ ಹಿಂದೆಯೇ ಅವರುಗಳು ವಾಗ್ದಾನವನ್ನು ಹೊಂದಿಕೊಳ್ಳವ ಸಾಧ್ಯತೆಯಿತ್ತು), ಅಂತಿಮವಾಗಿ ಅವರು ಯೋರ್ದಾನ್ ಹೊಳೆಯನ್ನು ದಾಟಿ ವಾಗ್ದಾನದ ದೇಶವನ್ನು ತಲುಪಿದರು. ಆ ಸಮಯದಲ್ಲಿ ಆದೇಶವನ್ನು ಕಾನಾನ್ ಎಂದು, ಅದರ ಜನರನ್ನು ಕಾನಾನ್ಯರೆಂದು ಕರೆಯುತ್ತಿದ್ದರು. ಇಸ್ರಾಯೇಲ್ಯರು ಅದನ್ನು ಅತಿಕ್ರಮಿಸಿದಾಗ ಅದು "ಇಸ್ರಾಯೇಲ್" ಎಂದು ಮಾರ್ಪಟ್ಟಿತು. ನಂತರದಲ್ಲಿ ರೋಮಾಯರು ಆ ಪ್ರದೇಶ ವನ್ನು ಪಾಲಿಸ್ತೇನ್ ಎಂದು ಕರೆದರು. ಈಗಲು ಸಹ ಈ ಅಂತಿಮವಾದ ಈ ಎರಡು ಹೆಸರುಗಳಿಂದಲೇ ಕರೆಯಲಾಗುತ್ತಿದೆ.[2]

ಪಾಲಿಸ್ತೇನ್ ಒಂದು ಚಿಕ್ಕದೇಶವಾಗಿದೆ. ಅದು ಮೇರಿಲ್ಯಾಂಡಿನಷ್ಟೆ ಗಾತ್ರದಲ್ಲಿದೆ ಅಥವಾ ಆಫ್ರೀಕಾದ ಟೋಗೋ ದೇಶದಷ್ಟಿದೆ. ಇಸ್ರಾಯೇಲ್ಯರು ಅದನ್ನು ವಶಪಡಿಸಿಕೊಂಡ ನಂತರ, ಅದು ಮಹಿಮೆಯುಳ್ಳ ಇತಿಹಾಸವನ್ನು ಹೊಂದಿಕೊಂಡಿತು. ಅದು ಮೆಸಪಟೋಮಿಯ (ಅಸ್ಸಿರಿಯ, ಬಾಬಿಲೋನ್, ಮತ್ತು ಪರ್ಶಿಯ ದೇಶಗಳಿರುವದಲ್ಲಿ) ಹಾಗೂ ಐಗುಪ್ತದ ನಡುವೆ ಇರುತ್ತದೆ. ಪಾಲಿಸ್ತೇನ್ ಚಿಕ್ಕ ದೇಶವಾದರೂ, ಸೊಗಸಾದ ದೇಶವಾಗಿತ್ತು. ಅದು ಉತ್ತಮವಾದ ಸೈನ್ಯದ ಬಲವನ್ನು ಹೊಂದಿದ್ದರಿಂದ, ಬಹಳ ಪ್ರಮುಖವಾದ ದೇಶವಾಗಿತ್ತು. ಅದು ಮಹಾ ಅಧಿಕಾರ ಹಾಗೂ ರಾಜಕೀಯ ಸ್ವಾತಂತ್ರವನ್ನು ಹೊಂದಿತ್ತು. ಮೂರು ಅರಸರು ಈ ದೇಶವನ್ನು ಆಳಿದ್ದರು (ಸೌಲ, ದಾವೀದ ಮತ್ತು ಸೋಲೋಮೋನ) ನಂತರದಲ್ಲಿ ಅದು ಬಲಹೀನವಾಯಿತು. ಅದು ಬಹಳ ಪ್ರಮುಖವಾದ ಸ್ಥಳವಾದ್ದರಿಂದ, ಸಕಲ ಕಾಲದಲ್ಲೂ ಅದು ಪರದೇಶಿಯರ ಆಳ್ವಿಕೆಗೆ ಒಳಪಟ್ಟಿತು.

ಯೇಸುವಿನ ಜೀವನ ಕಾಲದ ಸಮಯದಲ್ಲಿ ರೋಮಾಯರು (ಪರದೇಶಿಯರು) ಕ್ರಿ.ಪೂ. 63ರಲ್ಲಿ ಪಾಲೆಸ್ತೇನ್ ದೇಶವನ್ನು ಆಳುತ್ತಿದ್ದರು, ಹೊಸ ಒಡಂಬಡಿಕೆಯ ಕಾಲ ಹಾಗೂ ನಂತರದಲ್ಲೂ ಅವರು ತಮ್ಮ ಆಳಡಳಿತವನ್ನು ಮುಂದುವರೆಸಿದ್ದರು. ಸಂತೋಷವಿಲ್ಲದ ಈ ದೇಶವನ್ನು ಅಶ್ಯೂರ್ಯರು, ಬಾಬೇಲಿನವರು, ಪರ್ಶಿಯನ್ನರು, ಗ್ರೀಕರು, ಹಾಗೂ ರೋಮನ್ನರು ತಮ್ಮ ಅಧೀನದಲ್ಲಿಟ್ಟುಕೊಂಡಿದ್ದರು. ಯೋಹಾನ 8:33ರ ಯೆಹೂದ್ಯರ ಮಾತಿನಂತೆ, "ನಾವು ಅಬ್ರಹಾಮನ ಸಂತಾನದವರು ನಾವು ಯಾರಿಗೂ ಎಂದಿಗೂ ದಾಸರಲ್ಲ." ಇದು ಒಂದು ರಾಷ್ಟ್ರೀಯ ಹೆಮ್ಮೆಯ ಭಾವನೆ. ಪ್ರಾಯೋಗಿಕವಾಗಿ ಅವರು ಅನೇಕರಿಗೆ ದಾಸರಾಗಿದ್ದರು! ಅವರು ಈ ಮಾತನ್ನು ಆಡುತ್ತಿರುವ ಸಮಯದಲ್ಲೂ ಅವರು ದಾಸರೇ ಆಗಿದ್ದರು. ಅವರು ಸ್ವತಂತ್ರರಾಗಿರಲಿಲ್ಲ. ರೋಮಾಯರು ಅವರ ಮೇಲೆ ಸಂಪೂರ್ಣ ಹಿಡಿತ ಸಾಧಿಸಿದ್ದರು. ಹೆರೋದ್ಯರನ್ನು ಅವರನ್ನಾಳುವ ಅರಸರನ್ನಾಗಿ ನೇಮಿಸಿದ್ದರು. ಹೆರೋದ್ಯರು, ಪೂರ್ಣ ಯೆಹೂದ್ಯರಾಗಿರದೇ, ಏಸಾವನ ಸಂತಾನದವರಾದ ಎದೋಮ್ಯರಾಗಿದ್ದರು, ಅವನು ಯಾಕೋಬನ ಸಹೋದರ (ಯಾಕೋಬನ ಇನ್ನೊಂದು ಹೆಸರು ಇಸ್ರಾಯೇಲ್) ಯೆಹೂದ್ಯರು ಎದೋಮ್ಯರನ್ನು ದ್ವೇಷಿಸುತ್ತಿದ್ದರು. ಆದುದರಿಂದ ಯೇಸುವಿನ ಕಾಲದ ಪಾಲೆಸ್ತೇನ್‌ನಲ್ಲಿ ಆತ್ಮೀಕ ಹಾಗೂ ರಾಜಕೀಯ ಅರಾಜಕತೆ ಉದ್ಭವಿಸಿತ್ತು. ಇಂತಹ ಸಂದರ್ಭದಲ್ಲಿ ಯೇಸು ಈ ಸ್ಥಳದಲ್ಲಿ ಜನಿಸಿ ಮರಣವನ್ನು ಹೊಂದಿದನು.

ಯೇಸುವಿನ ಜನನ ಸ್ಥಳದ ಕುರಿತು ನಾವುಗಳು ಇನ್ನು ಸ್ಪಷ್ಟವಾಗಿ ತಿಳಿಸಬಹುದು. ಮತ್ತಾಯ ಹಾಗೂ ಲೂಕರು ತಿಳಿಸಿರುವಂತೆ ಬೆತ್ಲೇಹೇಮ್ ಎಂಬ ಹಳ್ಳಿಯ ಯೆರೂಸಲೇಮಿನಿಂದ ಐದು ಕಿಲೋಮೀಟರ್ ಅಂತರದಲ್ಲಿತ್ತು (ಮತ್ತಾಯ 2:1; ಲೂಕ 2:1-7). ನಂತರ ಯೇಸು "ಗಲಿಲಾಯದವನು" ಎಂದು ಕರೆಯಲ್ಪಟ್ಟನು, ಅದು ಪಾಲಿಸ್ತೇನಿನ ಉತ್ತರ ದಿಕ್ಕಿನಲ್ಲಿರುತ್ತದೆ. ದಕ್ಷಿಣದ ಬೆತ್ಲೆಹೇಮಿನಲ್ಲಿ ಯೇಸು ಏಕೆ ಹುಟ್ಟಿದನು? ಲೂಕನು ಕಾರಣ ನೀಡಿರುವನು. ಲೆಕ್ಕಾಚಾರದ ಹಾಗೂ ಸುಖ ನೀಡಬೇಕಾದ ಕಾರಣದಿಂದ ಆತನು ಪೂರ್ವಜನ ನಿಯಮದ ಪರಕಾರ ಖಾನೇಶು ಮಾಡಿಸಲು ಅಲ್ಲಿಗೆ ತೆರಳಿದ್ದನು. ಯೋಸೇಫ ಹಾಗೂ ಮರಿಯಳು, ದೂರ ಸ್ಥಳವಾದ ನಜರೇತಿನಿಂದ ಬೆತ್ಲೇಹೇಮಿಗೆ ದೂರಪ್ರಯಾಣ ಮಾಡಿದ್ದರು. ಲೂಕನ ಪ್ರಕಾರ ಯೋಸೇಫನು ದಾವೀದನ ಸಂತಾನದವನಾಗಿದ್ದರಿಂದ ಬೆತ್ಲೆಹೇಮಿನ ದಾವೀದ ನಗರದಲ್ಲಿ ವರದಿ ಸಲ್ಲಿಸಬೇಕಿತ್ತು. ಅವನು ತನ್ನ ಗರ್ಭವತಿಯಾದ ಹೆಂಡತಿಯನ್ನು ಹಿಂದೆ ಬಿಡದೆ, ಅವರಿಬ್ಬರು ಪ್ರಯಾಸದ ಪ್ರಯಾಣ ಮಾಡಿ ಬೆತ್ಸೆಹೇಮಿಗೆ ಬಂದರು, ಅಲ್ಲಿ ಯೇಸು ಜನಿಸಿದನು. ಅವರ ಚಲನದ ಕುರಿತು ಸ್ಪಷ್ಟ ಚಿತ್ರಣವಿರುವದಿಲ್ಲ. ಲೂಕ 2:39ರ ಪ್ರಕಾರ, ಯೆರೂಸ ಲೇಮಿನ ದೇವಾಲಯದಲ್ಲಿ ಯೇಸುವನ್ನು ಸಮರ್ಪಿಸಿದಾಗ, ಆತನು ನಾಲ್ವತ್ತು ದಿವಸಗಳ ಪ್ರಾಯದವನಾಗಿದ್ದನು (ಯಾಜಕಕಾಂಡ 12:1-6), ಅವರು ತಮ್ಮ ಪಟ್ಟಣವಾದ ನಜರೇತು ಎಂಬ ಊರಿಗೆ ಹಿಂದಿರುಗಿದರು. ಹೇಗೂ

ಮತ್ತಾಯ 2:13-23 ರಂತೆ, ಯೇಸುವಿನ ಜನನದ ನಂತರದ ಸಮಯದಲ್ಲಿ, ಹೆರೋದನು ಮಗುವಾದ ಯೇಸುವನ್ನು ಕೊಲ್ಲದಂತೆ, ಅವರು ತಪ್ಪಿಸಿಕೊಂಡು ಐಗುಪ್ತ ದೇಶಕ್ಕೆ ಹೋಗ ಬೇಕೆಂದು ಅವರಿಗೆ ಕನಸಿನಲ್ಲಿ ತಿಳಿಸಲಾಯಿತು. ದೈವೀಕವಾದ ಮಾರ್ಗದರ್ಶನದಂತೆ, ಅವರು ನಜರೇತಿಗೆ ಹಿಂದಿರುಗಿದರು. ಲೂಕ 2ರ ಘಟನೆಯ ಬಳಿಕ, "ಐಗುಪ್ತದ ಪ್ರಯಾಣ ಮಾಡಿದ್ದರು" ಸಮಯದ ಸ್ಪಷ್ಟತೆ ಇಲ್ಲದೆ ಇದ್ದರೂ, ಯೇಸು ನಜರೇತಿನಲ್ಲಿ ಬೆಳೆದನು (ಲೂಕ 4:16).

## ಆತನು ಹೇಗೆ ಜೀವಿಸಿದನು?

ಮತ್ತಾಯ ಮತ್ತು ಲೂಕರು ತಿಳಿಸಿರುವ ವಂಶಾವಳಿಯ ಪ್ರಕಾರ, ಯೇಸುವಿನ ಪೂರ್ವಜರ ಕುರಿತು ಅರಿಯುತ್ತೇವೆ. ಯೆಹೂದ್ಯರ ನೈತಿಕ ಹಾಗೂ ಆತ್ಮೀಕ ಸ್ಥಾನವನ್ನು ಅರಿಯಲು ಈ ವಂಶಾವಳಿಗಳು ಸಹಾಯಿಸುತ್ತೇವೆ, ಹಾಗೂ ಇನ್ನು ಅನೇಕ ಸಂಗತಿಗಳನ್ನು ಹಳೇ ಒಡಂಬಡಿಕೆಯಲ್ಲಿ ನೀಡಲಾಗಿದೆ, ಯೇಸುವಿನ ವಂಶಾವಳಿ ಬಹು ಪ್ರಮುಖವಾದ್ದರಿಂದ, ಆ ವಿಷಯದಲ್ಲೇ ತನ್ನ ಸುವಾರ್ತೆಯನ್ನು ಆರಂಭಿಸಿದನು. ವಂಶಾವಳಿಯ ಹೆಸರುಗಳನ್ನು ಓದುವದು ಬೇಸರದ ಸಂಗತಿಯಾದರೂ; ಆದರೆ ಮೊದಲ ಶತಮಾನದ ಯೆಹೂದ್ಯರಿಗೆ, ವಂಶಾವಳಿಯ ಚರಿತ್ರೆಯು, ಕುಟುಂಬದ ಹಳೆಯ ಭಾವಚಿತ್ರಗಳನ್ನು, ಅವುಗಳ ಹೆಸರಿನೊಂದಿಗೆ ನೋಡುವಾಗ, ಅವರ ಇತಿಹಾಸದ ನೆನಪು ಉಂಟಾಗುವಂತಿತ್ತು.

ಮತ್ತಾಯ ಹಾಗೂ ಲೂಕರು ತಿಳಿಸಿರುವ ವಂಶಾವಳಿಗಳ ಚರಿತ್ರೆ ಸಮೀಪವಾಗಿದ್ದರೂ, ಒಂದಕ್ಕೊಂದು ಸಮನಾಗಿರುವದಿಲ್ಲ. ಮತ್ತಾಯನು, ಯೆಹೂದ್ಯರ ಪಿತೃವಾದ ಅಬ್ರಹಾಮನಿಂದ ಆರಂಭಿಸಿ ಯೇಸುವಿನವರೆಗೆ ತಿಳಿಸಿರುವದಾದರೆ, ಲೂಕನು ಯೇಸುವಿನಿಂದ ಆರಂಭಿಸಿ, ಆದಾಮನ ಮುಖಾಂತರ ದೇವರ ಕಡೆಗೆ ಹಿಮ್ಮುಖವಾದ ಚರಿತ್ರೆಯನ್ನು ತಿಳಿಸಿರುವನು. ಎರಡು ಉದ್ದೇಶಗಳನ್ನೊಳಗೊಂಡವರಾಗಿ ಅವರು ಯೇಸುವಿನ ಎರಡು ವಿಧಗಳ ವಂಶಾವಳಿಗಳನ್ನು ದಾಖಲಿಸಿರುವರು. ಮತ್ತಾಯನು ಯೇಸುವನ್ನು ನಿಜವಾದ ಇಸ್ರಾಯೇಲ್ಯನು ಹಾಗೂ ಅರಸನಾದ ದಾವೀದನ ವಂಶದ ಇಸ್ರಾಯೇಲ್ಯರ ಮೆಸ್ಸೀಯನು ಎಂಬ ಸೂಚನೆಯನ್ನು ತಿಳಿಸಿರುವನು. ಲೂಕನು ಯೇಸುವಿನ ವಂಶಾವಳಿಯನ್ನು ವಿಸ್ತಾರವಾಗಿ ವಿವರಿಸಿ, ಯೇಸು, ಯೆಹೂದ್ಯರಿಗೆ ಮಾತ್ರವಲ್ಲದೆ, ಸಕಲ ಮಾನವರಿಗೆ ಸಂಬಂಧಪಟ್ಟವನು ಎಂದು ತಿಳಿಸಿರುವನು. ಸುವಾರ್ತೆಯು, ಯೇಸುವನ್ನು ಯೆಹೂದ್ಯರ ಇತಿಹಾಸ ಹಾಗೂ ಆತನ ಕುಟುಂಬದಲ್ಲಿ ದೃಢವಾದ ಸ್ಥಾಪನೆಯನ್ನು ಮಾಡಿರುತ್ತದೆ. ಯೇಸು, ಯೂದಾ ಕುಲದವನು, ಇಸ್ರಾಯೇಲ್ಯರ ಪ್ರಸಿದ್ಧರಾದ ಹಾಗೂ ಭಯಂಕರ ಪಾಪಿಗಳ ಮೂಲಕ್ಕೆ ಸೇರಿದವನು ಎಂದು ತಿಳಿಸುತ್ತವೆ.

ಯೋಸೇಫ ಹಾಗೂ ಮರಿಯಳು ಯೆಹೂದ್ಯ ಕುಟುಂಬದವರು ಎಂದು, ಹಾಗೂ ಅವರಿಗೆ ಒಬ್ಬ ಪ್ರಸಿದ್ಧನಾದ ಮಗನಿದ್ದನೆಂದು ಮಾತ್ರ ತಿಳಿದಿರುತ್ತೇವೆ. ಯೋಸೇಫನು ಮರಗೆಲಸದ ಕಸುಬಿನವನಾಗಿದ್ದನು (ಮತ್ತಾಯ 13:55), ಯೇಸು ಸಹ ಆ ಕೆಲಸವನ್ನೇ ಕಲಿತುಕೊಂಡಿದ್ದನು. ಈ ದಿನವು ಸಹ ಜನರು ಆತನನ್ನು ನಜರೇತಿನ ಬಡಗಿ ಎಂದು ಕರೆದಿದ್ದರು. ಜನನದ ಲೆಕ್ಕಾಚಾರದಲ್ಲಿ, ಯೋಸೇಫನ ಕುರಿತು ಹೆಚ್ಚಿನ ವಿವರಣೆಗಳಿರುವದಿಲ್ಲ (ಮತ್ತಾಯನಿಗಿಂತ ಲೂಕನು ಈ ವಿಚಾರವಾಗಿ ಹೆಚ್ಚು ತಿಳಿಸಿರುವನು, ಮಾರ್ಕನು ಏನನ್ನು ತಿಳಿಸಿರುವದಿಲ್ಲ). ಯೇಸುವಿನ ನಂತರದ ಜೀವಿತದಲ್ಲಿ, ಯೋಸೇಫನ ಕುರಿತ ಹೆಚ್ಚಿನ ವಿವರಣೆಗಳಿರುವದಿಲ್ಲ. ಯೇಸುವಿನ ನಂತರದ ಜೀವಿತದಲ್ಲಿ, ಯೋಸೇಫನ ವಿಚಾರಗಳಿರುವದಿಲ್ಲ. ಆದ್ದರಿಂದ ಯೇಸು ಬೆಳೆಯುವದರೊಳಗಾಗಿ, ಆ ಪ್ರಾಯಶಃ ಯೋಸೇಫನು ಮರಣ ಹೊಂದಿರಬಹುದು, ಆ ಕುರಿತು ವಿಶ್ಲೇಷಣೆ ಇರುವದಿಲ್ಲ.

ಮತ್ತಾಯ ಹಾಗೂ ಲೂಕನ ಪುಸ್ತಕಗಳಲ್ಲಿ ಕನ್ಯಾ ಗರ್ಭದ ದಾಖಲೆಗಳಿರುವದರಿಂದ

(ಮೂಲ ಪ್ರಸ್ತಾಪ), ಯೋಸೇಫನಿಗಿಂತಲೂ, ಮರಿಯಳ ವಿಚಾರವು ಹೆಚ್ಚಾಗಿರುತ್ತದೆ. ಯೇಸುವಿನ ಜನನದ ಸಂದರ್ಭದಲ್ಲಿ, ಮರಿಯಳು ಪರಿಪಕ್ವ ಹೊಂದಿದ ಸ್ತ್ರೀಯಾಗಿದ್ದಳು, ಮತ್ತು ಯೋಸೇಫನಷ್ಟೆ ಪ್ರಾಯದವಳಾಗಿದ್ದಳು. ಯೆಹೂದ್ಯ ಸಂಪ್ರದಾಯದಲ್ಲಿ, ಹೆಣ್ಣು ಮಕ್ಕಳನ್ನು ಮೊದಲು "ನಿಶ್ಚಿತಾರ್ಥ" ಮಾಡುತ್ತಿದ್ದರು, ನಂತರ ಅವರು 12 ರಿಂದ 14 ಪ್ರಾಯದವರಾಗಿದ್ದಾಗ, ಅವರಿಗೆ ನಿಶ್ಚಿತಾರ್ಥವಾದವರ ಸಂಗಡ ಮದುವೆ ಮಾಡುತ್ತಿದ್ದರು. ಇಂಥಾ ಘಟನೆಯ ನಡುವೆ ಕೇವಲ ಸಣ್ಣ ಪ್ರಾಯದವಳಾದ ಮರಿಯಳಿಗೆ, ಗಬ್ರಿಯೇಲ್ ದೂತನ ಸಂದೇಶವು ಆಶ್ಚರ್ಯವುಂಟು ಮಾಡಿರಬಹುದಲ್ಲವೇ. ಹದಿನಾಲ್ಕು ಪ್ರಾಯವಾದವಳು ಗರ್ಭವತಿಯಾಗಿ ದೇವರ ಗಂಡು ಮಗುವನ್ನು ಪಡೆಯವಳು ಎಂಬ ಸಂದೇಶವು ಅವಳಿಗೆ ದಿಗ್ಭ್ರಮೆಯಾಗಿರುವದಿಲ್ಲವೇ! ಅವಳು ನಂಬಿಕೆಯಿಂದ ಪ್ರತಿಕ್ರಿಯೆ ನೀಡಿರುವದಿಲ್ಲವೇ, "ಇಗೋ, ನಾನು ಕರ್ತನ ದಾಸಿ; ನಿನ್ನ ಮಾತಿನಂತೆ ನನಗಾಗಲಿ ಅಂದಳು" (ಲೂಕ 1:38). ಯೇಸುವಿನ ಜನನದ ನಂತರ, ಮರಿಯಳು ಆಗಾಗ್ಗೆ ಕಾಣಿಸಿಕೊಂಡಿರುವದಿಲ್ಲ. ಯಾವುದೇ ಅದ್ಭುತ ಕಾರ್ಯಗಳನ್ನು ಅವಳು ಮಾಡಿರುವದಿಲ್ಲ, ಅಥವಾ ಯಾವುದೇ ವಿಧವಾದ ಕ್ರೈಸ್ತ ಚಟುವಟಿಕೆಗಳ ಅಥವಾ ಆರಾಧನೆಯ ಕ್ರಮವನ್ನು ಆಕೆಗೆ ನೀಡಿರುವದಿಲ್ಲ. ಆಕೆ ಅದ್ಭುತವಾದ ಸ್ವಭಾವವನ್ನು ಹೊಂದಿದ್ದರೂ, ಆಕೆ ಪರಿಪೂರ್ಣಳಲ್ಲ (ಮಾರ್ಕ 3:21, 31-35); ಹೊಸ ಒಡಂಬಡಿಕೆಯು ಆಕೆಯನ್ನು ಸಮರ್ಪಣೆಗೊಂಡ ತಾಯಿಯ ಹಾಗೆ ಎಂದು ಚಿತ್ರಿಸಿರುವರೇ ಹೊರತು, ಆಕೆಗೆ ಇತರೆ ಶ್ರೇಷ್ಠ ಸ್ಥಾನಮಾನವನ್ನು ನೀಡಿರುವದಿಲ್ಲ.

ಮರಿಯಳು ಹಾಗೂ ಯೋಸೇಫನ ಆರ್ಥಿಕತೆಯ ಕುರಿತು, ಅವರು ಕೆಳಮಟ್ಟದ ಯೆಹೂದ್ಯ ಕುಟುಂಬದವರಾಗಿದ್ದರು, ಅವರನ್ನು ಫರಿಸಾಯರು ಮತ್ತು ಸದ್ದುಕಾಯರು "ಸ್ವಕೀಯರು" ಎಂದು ಕರೆದಿದ್ದರು. ಇದನ್ನು ನಾವು ಹೇಗೆ ಅರಿಯಬಹುದು? ಲೂಕ 2:22-24ರಲ್ಲಿ ಒಂದು ಸಂಪನ್ಮೂಲವಿದೆ. ಯೇಸು ಮಗುವಾಗಿರುವಾಗ ದೇವಾಲಯಕ್ಕೆ ಒಯ್ದರು. ಮೋಶೆಯ ಧರ್ಮಶಾಸ್ತ್ರದ ಪ್ರಕಾರ ಚೊಚ್ಚಲ ಗಂಡು ಮಗುವನ್ನು ಅದರ ಹೆತ್ತ ತಂದೆ ತಾಯಿಗಳು ದೇವಾಲಯಕ್ಕೆ ತೆಗೆದುಕೊಂಡು ಹೋಗಿ ಒಂದು ಕುರಿಮರಿಯನ್ನು ದೇವಾಲಯದಲ್ಲಿ ಸಮರ್ಪಿಸಬೇಕಿತ್ತು. ಅದರ ಬದಲಾಗಿ ಬೆಳವಕ್ಕಿಯನ್ನು ಸಹ ನೀಡಬಹುದಾಗಿತ್ತು (ನೋಡಿರಿ ಯಾಜಕಕಾಂಡ 12:6-8), ಯೇಸುವಿಗಾಗಿ ಎರಡನೇ ಮಟ್ಟದ ಯಜ್ಞವನ್ನು ಸಮರ್ಪಿಸಲಾಯಿತು ಎಂದು ಲೂಕನು ತಿಳಿಸಿರುವನು. ಈ ಕಾರಣದಿಂದ, ಮರಿಯಳು ಮತ್ತು ಯೋಸೇಫ ಪಾಲಿಸ್ತೇನದ ಸಮಾಜದಲ್ಲಿ ಬಡವರ್ಗದ ಕುಟುಂಬದವರಾಗಿದ್ದರು ಎಂದು ತಿಳಿದರೂ, ಅವರು ಅನಾಥರಾಗಿದ್ದರು ಎಂದು ಪರಿಗಣಿಸಬಾರದು. ಯಾಕೆಂದರೆ ಯೋಸೇಫನು ಬಡಗಿತನದ ವ್ಯಾಪಾರಿಯಾಗಿದ್ದರಿಂದ, ತನ್ನ ಕುಟುಂಬವನ್ನು ಸಲುಹುವ ಸಲುವಾಗಿ ಹೆಚ್ಚು ಸಂಪಾದನೆ ಮಾಡಿರಬಹುದು.

ತಂದೆ ತಾಯಿಗಳ ಸಂಗಡ, ಯೇಸು ಸಹೋದರ ಸಹೋದರಿಯರನ್ನು ಸಹ ಹೊಂದಿದ್ದನು. ಆತನು ಒಬ್ಬಂಟಿಗನಾಗಿರದೆ, ಕುಟುಂಬದ ಇತರೆ ಸದಸ್ಯರ ಸಂಗಡ ಬೆಳೆದನು. ಆತನ ಸಹೋದರ ಸಹೋದರಿಯರ ಬಗ್ಗೆ ನಾಲ್ಕು ಸುವಾರ್ತೆಗಳಲ್ಲಿ ಬರೆದವೆ (ಮತ್ತಾಯ 12:46, 47; ಮಾರ್ಕ 3:31, 32; ಲೂಕ 8:19, 20; ಯೋಹಾನ 7:1-5). ಮತ್ತಾಯ ಮತ್ತು ಮಾರ್ಕನಲ್ಲಿ, ಯಾಕೋಬ, ಯೋಸೋ, ಸಿಮೋನ ಹಾಗೂ ಯೂದ ಎಂಬ ಸಹೋದರರ ಹೆಸರನ್ನು ದಾಖಲಿಸಲಾಗಿದೆ. ಮತ್ತಾಯ, ಮಾರ್ಕ, ಹಾಗೂ ಯೋಹಾನ ಸುವಾರ್ತೆಗಳಲ್ಲಿ, ಯೇಸುವಿನ ಜೀವಿತ ಕಾಲದಲ್ಲಿ, ಆತನ ಸಹೋದರರು ಆತನನ್ನು ನಂಬಲಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿರುವರು. ಮತ್ತಾಯ ಮತ್ತು ಮಾರ್ಕ ಆತನಿಗೆ ಸಹೋದರಿಯರಿದ್ದರು ಎಂದು ಸಹ ತಿಳಿಸಿರುವರು (ಮತ್ತಾಯ 13:56; ಮಾರ್ಕ 6:3), ಆದರೆ ಅವರುಗಳ ಹೆಸರನ್ನು ನಮೂದಿಸಿರುವದಿಲ್ಲ. ಯುದಾಯ ಸಂಪ್ರದಾಯದಲ್ಲಿ ಇದು ಅಸಹಜವಾಗಿದೆ. ಕೆಲವರ ಪ್ರಕಾರ ಅವರೆಲ್ಲರು ಆತನ ಚಿಕ್ಕಪ್ಪ ದೊಡ್ಡಪ್ಪಂದಿರ ಮಕ್ಕಳಿರಬಹುದು ಎಂಬುದು ಕೆಲವರ

ಅಭಿಪ್ರಾಯವಾಗಿದೆ. ಹೊಸ ಒಡಂಬಡಿಕೆಯ ಸಾಕ್ಷಾಧಾರಗಳ ಸಂಗಡ, ಯೋಸೇಫಸನ ಪ್ರಕಾರ, ಯೇಸು ಯಾಕೋಬನೆಂಬ ಒಬ್ಬ ಸಹೋದರನನ್ನು ಹೊಂದಿದ್ದನು, ಅವನನ್ನು ಯೆಹೂದ್ಯ ಅಧಿಕಾರಿಗಳು ಸಮ್ಮುಖಕ್ಕೆ ತಂದದ್ದರಿಂದ, ಅವನ ಹೆಸರನ್ನು ನಮೂದಿಸಲಾಗಿದೆ. ಇನ್ನು ಕೆಲವರ ಅಭಿಪ್ರಾಯದ ಪ್ರಕಾರ, ಅವರೆಲ್ಲರು, ಯೋಸೇಫನ ಹಿಂದಿನ ಹೆಂಡತಿಯ ಮಕ್ಕಳು ಎಂದಿರುವರು (ಇತಿಹಾಸದಲ್ಲಿರುವದಿಲ್ಲ), ಇದು ದೈವ ಶಾಸ್ತ್ರದ ಅಧ್ಯಯನವಷ್ಟೆ, ಇದಕ್ಕೆ ಯಾವುದೇ ಸಾಕ್ಷಾಧಾರಗಳಿರುವದಿಲ್ಲ. ಮರೀಯಳ ಮತ್ತು ಯೋಸೇಫನ ಕುಟುಂಬವು ಅನೇಕ ಮಕ್ಕಳಿಂದ ತುಂಬಿತ್ತು ಎಂಬ ಸೂಚನೆಯನ್ನು ನಾವುಗಳು ಕಾಣುತ್ತೇವೆ. (ಸಹೋದರಿಯರನ್ನು ಲೆಕ್ಕಿಸಿದರೆ, ಒಟ್ಟು ಏಳು ಜನ) ಯೆಹೂದ್ಯ ಕುಟುಂಬದಲ್ಲಿ ಒಂದೇ ಮಗುವಿರದೆ, ಅನೇಕರಿದ್ದರು ಎಂಬುದಕ್ಕೆ ಐತಿಹಾಸಿಕ ದಾಖಲೆಗಳಿವೆ.

**ಯೇಸುವಿನ ಜೀವನ ಶೈಲಿ**

ದೇವರ ಮಗುವಿಗೆ "ತಲೆಯಿಡುವಷ್ಟು ಸ್ಥಳವಿಲ್ಲ" ಎಂಬ ಹೇಳಿಕೆಯನ್ನು ಆತನು ನೀಡಿದ ನಂತರ, ಆತನು "ಮನೆಯಿಲ್ಲದವನಾಗಿದ್ದನು" (ಮತ್ತಾಯ 8:20). ಯಾಕಂದರೆ ಆತನು ಗಲಿಲಾಯವನ್ನು ತೊರೆದು, ಯುದಾಯದ ದಕ್ಷಿಣಕ್ಕೆ ತೆರಳಿದನು ಎಂದು ಸುವಾರ್ತೆಗಳು ತಿಳಿಸುತ್ತವೆ. ಆದಾಗ್ಯೂ ಆತನು ಸಂಚರಿಸಿದ ಸ್ಥಳದಲ್ಲಿ ಆತನು ವಾಸಿಸುವ ಮನೆಗಳನ್ನು ಹೊಂದಿದ್ದನು ಎಂದು ಸಂಪ್ರದಾಯಗಳು ತಿಳಿಸುತ್ತವೆ.

"ಆರೋಗ್ಯ" ಮತ್ತು "ಐಶ್ವರ್ಯ" ಎಂದು ಪ್ರತಿಪಾದಿಸುವವರು, ಯೇಸುವಿನ ಕುರಿತಾದ ಒಂದು ವಿರೋಧವನ್ನು ಪ್ರಕಟಿಸಿರುವರು (ಎಲ್ಲರು ಐಶ್ವರ್ಯವಂಥರಾಗಿರಬೇಕು ಎಂದು ದೇವರು ಬಯಸುತ್ತಾನೆ ಎಂದು ಪ್ರತಿಪಾದಿಸುವ ಒಂದು ಗುಂಪು) ಯೇಸು ಶ್ರೀಮಂತ ನಾಗಿದ್ದರಿಂದ, ಆತನ ವಿಶ್ವಾಸಿಗಳು ಸಹ ಶ್ರಿಮಂತರಾಗಿರಬೇಕು ಎಂದು ಹೇಳುತ್ತಾರೆ. ಯಾಕೆಂದರೆ, ಯೇಸು ಚಿನ್ನ, ರತ್ನ, ಬೋಳ, ಹಾಗೂ ದೂಪವೆಂಬ ಬಹುಬೆಲೆಯುಳ್ಳ ಬಹುಮಾನಗಳನ್ನು ತನ್ನ ಜನನದ ಸಮಯದಲ್ಲಿ ಪಡೆದಿದ್ದನು (ಮತ್ತಾಯ 2:11) ಹಾಗೂ ಆತನ ಹಿಂದೆ ಹಿಂಬಾಲಿಸುತ್ತಿದ್ದವರ ಕ್ಷೇಮವನ್ನು ನೋಡಿಕೊಳ್ಳಲು, ಆತನ ಬಳಿ ಬಹಳಷ್ಟು ಐಶ್ವರ್ಯವಿತ್ತು - ಆದ್ದರಿಂದ ಆತನು ಶ್ರೀಮಂತನಾಗಿದ್ದನು ಎಂದು ಪ್ರತಿಪಾದಿಸುತ್ತಾರೆ. ಆದರೆ ಯೇಸುವಿನ ಭೋದನೆ ಇದಕ್ಕೆ ತದ್ವಿರುದ್ಧವಾಗಿರುತ್ತದೆ. ಯಾಕಂದರೆ ಆತನು ಅನಾಥನಾಗಲೀ ಅಥವಾ ಶ್ರೀಮಂತನಾಗಲೀ ಆಗಿರಲಿಲ್ಲ (ಮತ್ತಾಯ 8:20; ಲೂಕ 12:13-21; 16:19-31). ಆದ್ದರಿಂದ ಈ ದಿನಗಳಲ್ಲಿ ಶ್ರೀಮಂತರಾಗ ಬಯಸುವವರಿಗೆ ಈ ವಿಚಾರವು ಉತ್ತೇಜನ ಕಾರಿಯಾಗಿರುವದಿಲ್ಲ. ಯೇಸು ತನ್ನ ಅಪೊಸ್ತಲರಿಗೆ ಯಾವ ಶ್ರೀಮಂತಿಕೆಯನ್ನು ನೀಡಲಿಲ್ಲ; ಲೂಕ 8:1-3. "ಯೇಸುವಿನ ಹಿಂದೆ ಹೋಗುತ್ತಿದ್ದ ಪುರುಷ ಹಾಗೂ ಸ್ತ್ರೀಯರು ತಮ್ಮಲ್ಲಿರುವದನ್ನೇ ನೀಡುತ್ತಿದ್ದರು."

ಯೇಸುವಿಗೆ ಅನೇಕ ವೈರಿಗಳಿದ್ದರೂ, ಆತನು ಅನೇಕ ಒಳ್ಳೆಯ ಸ್ನೇಹಿತರನ್ನು ಹೊಂದಿದ್ದನು ಎಂದು ಸುವಾರ್ತೆಗಳು ತಿಳಿಸುತ್ತವೆ. ಹನ್ನೆರಡು ಜನ ಅಪೊಸ್ತಲರು ಆತನೊಂದಿಗೆ ಮೂರುವರೆ ವರ್ಷಗಳ ಕಾಲ ಕಲಿತರು. ಆತನ ಹಿಂದೆ ಇನ್ನು ಅನೇಕ ಜನರು ಇದ್ದರು ಎಂಬ ಸೂಚನೆಯನ್ನು ಅಪೊಸ್ತಲರ ಕೃತ್ಯಗಳು 1:15-26ರಲ್ಲಿ ಗಮನಿಸುತ್ತೇವೆ. ಯೇಸು ಮಾಡಿದ ಸಾರ್ವಜನಿಕ ಸೇವೆಯಲ್ಲಿ ಯೂದನು ಸಹ ಪಾಲುದಾರನಾಗಿದ್ದರು, ಅಂತಿಮವಾಗಿ ಅವನು ಬದಲಾದನು. ಲೂಕ 8 ರಲ್ಲಿ, ಸ್ತ್ರೀಯರ ಕುರಿತು ನೋಡುವಾಗ, ಇನ್ನು ಅನೇಕರು ಆತನನ್ನು ಹಿಂಬಾಲಿಸಿದ್ದರು ಎಂಬುದು ದೃಢವಾಗುತ್ತದೆ. ಲೂಕ 10:1ರಲ್ಲಿ, ಯೇಸು ಸಂಧಿಸಲಿದ್ದ ಹಳ್ಳಿ ಪಳ್ಳಿಗಳನ್ನು ಸಂಧಿಸಲು, ಎಪ್ಪತ್ತು ಜನರ ಗುಂಪನ್ನು ಆತನು ಮುಂದಾಗಿ ಕಳುಹಿಸಿದ್ದನು. ಈ ಗುಂಪಿನಲ್ಲಿದ್ದವರು ಆತನ ಸ್ನೇಹಿತರಾಗಿದ್ದರು.

ಲೂಕ 10:38-42 ರಲ್ಲಿ ಇಬ್ಬರು ಸಹೋದರಿಯರಾದ ಮಾರ್ಥ ಮತ್ತು ಮರಿಯಳ

ಮನೆಗೆ ತೆರಳಿದ್ದನು ಎಂದು ನೋಡುತ್ತೇವೆ. ನಂತರದಲ್ಲಿ ಯೋಹಾನ 11ರಲ್ಲಿ ಆ ಸಹೋದರಿಯರಿಗೆ ಒಬ್ಬ ತಮ್ಮನಿದ್ದು, ಯೇಸು ಅವನನ್ನು ಹಾಗೂ ಆ ಸಹೋದರಿಯರನ್ನು ಪ್ರೀತಿಸಿದ್ದನು (ವಚನಗಳು 3, 5, 36) ಎಂದು ನೋಡುತ್ತೇವೆ. ಸಾವಕಾಶವಾಗಿ, ತನ್ನ ಶಿಷ್ಯನಿಗಿಂತಲೂ, ಜನರಿಗೆ ಸಮೀಪವಾಗಿದ್ದನು. ಯೇಸುವಿಗೆ ಎಷ್ಟು ಜನ ಸ್ನೇಹಿತರಿದ್ದರು ಎಂಬುದಕ್ಕೆ ಸಾಕ್ಷಿಗಳಿದ್ದರೂ, ಆತನು ಅನೇಕ ಸ್ನೇಹಿತರನ್ನು ಹೊಂದಿದ್ದನು, ಮುಖ್ಯವಾಗಿ ಯೆಹೂದ್ಯ ಸಮುದಾಯದಲ್ಲಿ ಬಹಳ ಬಡವರಾದವರನ್ನು ತನ್ನ ಸ್ನೇಹಿತರನ್ನಾಗಿ ಮಾಡಿಕೊಂಡಿದ್ದನು (ಲೂಕ 15:1, 2; 19:1-10).

**ಭಾಷೆ, ವಿದ್ಯಾ ಅರ್ಹತೆ, ಪ್ರಯಾಣ?**

ಯೇಸುವಿನ ಜೀವಿತದ ಆರಂಭ ಮತ್ತು ಅಂತ್ಯದ ಮೂರು ವರ್ಷಗಳ ಕಾಲದಲ್ಲಿ ಯೇಸು ಸರಳವಾದ ಜೀವಿತವನ್ನು ಜೀವಿಸಿದ್ದನು. ಯೇಸುವಿನ 2 ವರ್ಷದಿಂದ 30 ವರ್ಷದ ನಡುವಿನ ಜೀವಿತದ ಬಗ್ಗೆ ಸುವಾರ್ತೆಗಳು ಯಾವ ದಾಖಲೆಗಳನ್ನು ನೀಡಿರುವದಿಲ್ಲ (ಹನ್ನೆರಡರಲ್ಲಿ ಒಡೆದ ಒಂದು ಘಟನೆಯನ್ನು ಹೊರತುಪಡಿಸಿ), ಯೇಸು ಒಬ್ಬ ಸಾಧಾರಣ ಯೆಹೂದ್ಯ ಯೌವನಸ್ಥನ ಜೀವಿತವನ್ನು ಜೀವಿಸಿದ್ದನು.

ಮೊದಲ ಶತಮಾನದಲ್ಲಿ ಜೀವಿಸಿದ ಯೆಹೂದ್ಯನಾದ, ಯೌವನಸ್ತ ಯೇಸು ಯಾವ ಭಾಷೆಯನ್ನು ಮಾತನಾಡಿದ್ದನು? ಯೇಸು ಪಾಲಿಸ್ತೇನಿನ ಅರಾಮಿಕ್ ಹಾಗೂ ಇಬ್ರಿಯ ಭಾಷೆಯನ್ನು ಮಾತನಾಡಿದ್ದನು ಇದರಲ್ಲಿ ಸಂಶಯವಿಲ್ಲ. ಯೇಸು ತನ್ನ "ತಂದೆಯನ್ನು" "ಅಬ್ಬ" ಎಂದು ಕರೆದಿದ್ದನು (ಮಾರ್ಕ 14:36), ಆತನು ಶಿಲುಬೆಯ ಮೇಲೆ ಏಲೀ ಏಲೀಲಮಾ ಸಭಕ್ತಾನಿ - "*ನನ್ನ ದೇವರೇ, ನನ್ನ ದೇವರೇ,* ಏಕೆ ನನ್ನನ್ನು ಕೈ ಬಿಟ್ಟಿದ್ದಿ?" (ಮತ್ತಾಯ 27:46). ಆತನು ಗಲಿಲಾಯದಲ್ಲಿ ಬೆಳೆದವನಾದ್ದರಿಂದ ಅಲ್ಲಿನವರು "ಹೆಲೆನೆಸ್ಟಿಕ್" ಸಂಸ್ಕೃತಿಯವ ರಾದ್ದರಿಂದ, ಹಾಗೂ "ಸೆಫೊರಿಸ್" ಪಟ್ಟಣದ ಸಮೀಪ ಇದ್ದದ್ದರಿಂದ, ಆತನು "ಕೋಹ್ನೆ" (ಅಂದರೆ ಗ್ರೀಕ್‌ಗೆ ವಿರುದ್ಧವಾದ) ಭಾಷೆಯನ್ನು ಮಾತನಾಡಿರಬಹುದು. ಆ ಕಾಲದಲ್ಲಿ ಪಾಲಿಸ್ತೇನಿನಲ್ಲಿ ಗ್ರೀಕ್ ಭಾಷೆಯ ರಾಷ್ಟ್ರೀಯ ಭಾಷೆ ಹಾಗೂ ವ್ಯವಹಾರಿಕ ಭಾಷೆಯಾಗಿತ್ತು. ಅಲೆಕ್ಸಾಂಡರ್ ಮಹಾರಾಜನು ಈ ಭಾಷೆಯನ್ನು ಪ್ರಸಿದ್ಧಿ ಪಡಿಸಿದ್ದನು (ಗ್ರೀಕ್ ಸಂಸ್ಕೃತಿ), ಅದನ್ನು ಮೂರು ಶತಮಾನಗಳ ಹಿಂದೆಯೇ ಮಾಡಿದ್ದನು. ಆ ಸಂದರ್ಭದಲ್ಲಿ ರೋಮಾಯರು ಪಾಲಿಸ್ತೇನ್‌ನ್ನು ಆಳುತ್ತಿದ್ದರಿಂದ, ಯೇಸು ಲ್ಯಾಟೀನ್ ಭಾಷೆಯನ್ನು ಸಹ ಅರಿತಿರಬಹುದು.[3] ಪಿಲಾತನು ಯೇಸುವಿನ ವಿಚಾರಣೆಯನ್ನು ಮಾಡಿದ್ದರಿಂದ, ಅಲ್ಲಿ ಬಳಸಿದ ಭಾಷೆ ಏನು ಎಂಬ ಪ್ರಶ್ನೆಯಾಗುತ್ತದೆ. ಒಂದು ವೇಳೆ ಅವರು ಭಾಷಾನುವಾದ ಮಾಡಿ ಮಾತನಾಡಿರಬಹುದು. ಯೇಸು ಲ್ಯಾಟೀನ್ ಭಾಷೆಯನ್ನು ಪ್ರಬುದ್ಧವಾಗಿ ಮಾತನಾಡದಿದ್ದರೂ, ಪಿಲಾತನು ಅರಾಮ್ಯ ಭಾಷೆಯನ್ನು ಮಾತನಾಡಿರಬಹುದು. ಅರಾಮ್ಯ ಭಾಷೆಯಲ್ಲಿ ಯೇಸು ಪ್ರಬುದ್ಧನಾಗಿರದಿದ್ದರೂ, ಬಹುಶಃ ಆತನು ಗ್ರೀಕ್ ಹಾಗೂ ಲ್ಯಾಟೀನ್ ಭಾಷೆಯನ್ನು ಮತನಾಡಿರಬಹುದು.

ಯೇಸು ಪಡೆದಿರಬಹುದಾದ ಯಾವದೇ ತರಬೇತಿಯ ವಿಚಾರದಲ್ಲಿ, ಹೊಸ ಒಡಂಬಡಿಕೆಯಲ್ಲಿ ಏನನ್ನೂ ಹೇಳಿರುವದಿಲ್ಲ. ಒಂದು ವೇಳೆ, ಮನೆಯಲ್ಲಿ ಅಥವಾ ಸಭಾಮಂದಿರದಲ್ಲಿ ಉಪದೇಶವನ್ನು ಆತನು ಕೇಳಿರಬಹುದು (ಲೂಕ 4:16 ಆತನು ಸಭಾಮಂದಿರಗಳಿಗೆ ತಪ್ಪದೆ ಹೋಗುತ್ತಿದ್ದನು), ಯೆಹೂದ್ಯ ಮಕ್ಕಳಿಗೆ, ಯೆಹೂದ್ಯರು ಶಿಕ್ಷಕರನ್ನು ನೇಮಿಸಿಕೊಳ್ಳುತ್ತಿದ್ದರು. ಯೋಸೇಫನು ಬಡಗಿಯಾದ್ದರಿಂದ, ಇಂಥಹ ಸೌಲಭ್ಯವನ್ನು ಒದಗಿಸಿಕೊಳ್ಳಲು ಸಾಧ್ಯವಿಲ್ಲದೆ ಇರಬಹುದು. ಲೂಕ 2:41-52 ರಲ್ಲಿ ಯೇಸು ಭೋಧಕರುಗಳೊಂದಿಗೆ ಚರ್ಚಿಸುವಾಗ, "ಆತನು ಆಡಿದ ಮಾತುಗಳನ್ನು ಕೇಳಿದವರೆಲ್ಲರು ಆತನ ಬುದ್ಧಿಗೂ ಉತ್ತರಗಳಿಗೂ ಆಶ್ಚರ್ಯಪಟ್ಟರು" (ವಚನ 47). ಈ ಉದಾಹರಣೆಯಿಂದ ಲೂಕನು

ಯೇಸುವಿನ ವಿದ್ಯಾ ಅರ್ಹತೆಗೆ ಒತ್ತು ನೀಡದೆ, ಆತನು ದೇವರ ಮಗನಾದ್ದರಿಂದ ಸಹಜವಾಗಿ ಜ್ಞಾನಿಯಾಗಿದ್ದನು ಎಂಬದನ್ನು ತೋರಿಸಿರುವನು. ಈ ವಿಚಾರದೊಂದಿಗೆ, ಯೇಸು ತನ್ನ ತಂದೆತಾಯಿಗಳ ಜೊತೆಯಲ್ಲಿ ನಜರೇತಿಗೆ ಬಂದು ಅಲ್ಲಿ ಅವರಿಗೆ ಅಧೀನನಾಗಿದ್ದನು ಎಂದು ಲೂಕನು ಮುಂದುವರೆಸಿರುವನು (ವಚನ 51). ಆತನು ಸಹಜವಾದ ಸನ್ನಿವೇಶದಲ್ಲಿ ತನ್ನ ಜೀವಿತವನ್ನು ಜೀವಿಸಿದನು. ಆತನ ವಿದ್ಯಾರ್ಹತೆಯ ಕುರಿತು ಹೆಚ್ಚಿನ ಮಾಹಿತಿ ದೊರೆಯದೆ ಇದ್ದರು, ಆತನು ಅವಿದ್ಯಾವಂತನಾಗಿದ್ದನು ಎಂಬದು ಕೆಲವರ ತರ್ಕವಾಗಿರುತ್ತದೆ. ಆತನು ನಜರೇತಿನ ಸಭಾಮಂದಿರದಲ್ಲಿ ಗಟ್ಟಿಯಾದ ಧ್ವನಿಯಿಂದ ಓದಿದನು ಎಂಬದು ಲೂಕನ ದಾಖಲೆಯಾಗಿದೆ (4:16-20).

ಯೇಸು ಮಗುವಾಗಿದ್ದಾಗ, ಐಗುಪ್ತದಲ್ಲಿ ಪ್ರವಾಸಿಯಾಗಿದ್ದನು ಎಂಬ ಸಂಗತಿಯು ಹೊರತುಪಡಿಸಿ, ಆತನು ಪಾಲೆಸ್ತೇನನ್ನು ತೊರೆದು ಹೊರದೇಶಕ್ಕೆ ಹೋದನು ಎಂಬುದಕ್ಕೆ ಯಾವುದೇ ಸಾಕ್ಷಿಗಳಿರುವದಿಲ್ಲ.[4] ಆತನು ಮದುವೆಯಾಗಿ ಮಕ್ಕಳನ್ನು ಹೆತ್ತನು ಎಂಬದಕ್ಕೂ ಸಾಕ್ಷಿ ಇರುವದಿಲ್ಲ. ಈ ವಿಧವಾದ ಕಥೆಗಳು ಕಲ್ಪನೆಗಳೇ ವಿನಃ, ಇತಿಹಾಸದಲ್ಲಿರುವದಿಲ್ಲ, ಆತನ ಕುರಿತು ಊಹಪೋಹಗಳಲ್ಲ.

ಇಂತಹ ಸಾಧಾರಣ ಹಿನ್ನೆಲೆಯನ್ನು ಹೊಂದಿದ ಪುರುಷನು ತನ್ನ ದೇಶವನ್ನು ತೊರೆದು ಹೊರದೇಶಕ್ಕೆ ಹೋಗದೆ ಇದ್ದರೂ, ಲೋಕದಾದ್ಯಂಥ ಜನರು ಆತನನ್ನು ನೆನಪುಮಾಡಿ, ಅಧಿಕವಾದ ಆಸಕ್ತಿಯನ್ನು ಆತನ ಕುರಿತು ತೋರಿರುವರು. ರೋಮಾ ಆಡಳಿತ ಸಮಯದಲ್ಲಿ, ಯೇಸು ಪಾಲಿಸ್ತೇನಿನಲ್ಲಿ ಜೀವಿಸಿ, ಮರಣವನ್ನು ಹೊಂದಿದನು. ಆತನು ಸಾಧಾರಣವಾದ ಯೆಹೂದ್ಯನಾಗಿ ಜೀವಿಸಿ ಮೂವತ್ತನೇ ಪ್ರಾಯದಲ್ಲಿ ಕ್ರೂಜೆಯ ಮರಣಕ್ಕೆ ಒಳಗಾದನು. ಆತನು ಹೆಚ್ಚು ವರ್ಷಗಳ ಕಾಲ ಈ ಲೋಕದಲ್ಲಿ ಜೀವಿಸದೆ ಇದ್ದರೂ, ನೆನಪಿಡುವಂಥ ಜೀವಿತವನ್ನು ಜೀವಿಸಿದ್ದನ್ನು ಆತನ ನೆನಪಿನ ನಿಮಿತ್ತವಾಗಿ, ಈ ದಿನವು ನಾವುಗಳು ಆತನ ಕುರಿತು ಮಾತನಾಡುತ್ತಿರುವದಿಲ್ಲವೇ!

---

ಟಿಪ್ಪಣಿಗಳು

[1]ಇತರ ನಾಲ್ವರು ಯಾರೆಂದರೆ ಹೇರೋದ ಅಂತಿಪ (ಮತ್ತಾಯ 14:1), ಸ್ನಾನಿಕನಾದ ಯೋಹಾನನನ್ನು ಶಿರಚ್ಛೇದನ ಮಾಡಿದನು; ಅಂತಿಪನ ಅಣ್ಣನಾದ ಫಿಲಿಪ್ಪನು ಈತನ ಹೆಂಡತಿಯನ್ನು ಅಂತಿಪನು ಮದುವೆಯಾದನು, ಇದರ ಫಲಿತವಾಗಿ ಸ್ನಾನಿಕನಾದ ಯೋಹಾನನು ಶಿರಚ್ಛೇದಿಸಲ್ಪಟ್ಟನು (ಮಾರ್ಕ 6:17); ಹೆರೋದ ಅಗ್ರಿಪ್ಪ I (ಅಪೊಸ್ತಲರ ಕೃತ್ಯಗಳು 12), ಅಪೊಸ್ತಲನಾದ ಯಾಕೋಬನನ್ನು ಕೊಂದನು; ಮತ್ತು ಹೆರೋದ ಅಗ್ರಿಪ್ಪ II (ಅಪೊಸ್ತಲರ ಕೃತ್ಯಗಳು 26), ಪೌಲನ ಪ್ರತಿವಾದವನ್ನು ಕೇಳುದನು. [2]ಸಹಾಯಕರವಾದ ಚರ್ಚೆ ಮತ್ತು ಪಟಗಳನ್ನು ಈ ಪುಸ್ತಕದಲ್ಲಿ ಕಾಣಬಹುದು - Tim Dowley, *The Kregel Bible Atlas* (Grands Rapids, Mich.: Kregel Publications, 2002). [3]Koine, or "common" ಗ್ರೀಕ್ ಭಾಷೆಯನ್ನು ಯೇಸುವಿನ ಕಾಲದಲ್ಲಿ ಮಾತನಾಡುತ್ತಿದ್ದರು. ಮತ್ತು ಇದು ಶ್ರೇಷ್ಟ ಸಾಹಿತ್ಯದ ಭಾಷೆಗಿಂತ ಭಿನ್ನವಾದದ್ದು. craig A. ಅವರು ಕ್ರಿಸ್ತ ಪೂರ್ವ 70 ವರ್ಷಕ್ಕಿಂತ ಮುಂಚೆ ಗ್ರೀಕಿನ ಪ್ರಭಾವ ತುಂಬ ಕಡಿಮೆಯಾಗಿತ್ತೆಂದು ಹೇಳಿದರು ಆದರು, ಗೆಲಲಿಯಾದ ಯೂದರು ಗ್ರೀಕನು ಮಾತಡಿದರೆಂದು ಒಪ್ಪಿಕೊಂಡನು. (Craig A. Evans, *Fabricating Jesus: How Modern Scholars Distort the Gospels* [Downers Grove, Ill.: InterVarsity Press, 2006], 113-22.) [4]Unfortunately, this does not Keep People from trying to manufacture numerous travels for jesus. A recent example is William W. Mountcastle *The Secret Ministry of Jesus: Pioneer Prophet of Interfaith Dialogue* (New York: University Press of America, 2007), which claims on the basis of historically questionable sources that Jesus had a secret ministry in India, Tibet, and China.